**ಈರಪ್ಪ ಎಂ. ಕಂಬಳಿ** ಕೊಪ್ಪಳ ಜಿಲ್ಲೆಯ ಯಲಬುರ್ಗದವರು. ಕರ್ನಾಟಕ ಸರ್ಕಾರದ ಭಾಷಾಂತರ ನಿರ್ದೇಶನಾಲಯದ ನಿರ್ದೇಶಕರಾಗಿದ್ದ ಅವರು ನಿವೃತ್ತಿಯ ನಂತರ ಬೆಂಗಳೂರುವಾಸಿ. ಲಲಿತ ಪ್ರಬಂಧ ಕ್ಷೇತ್ರದಲ್ಲಿ ಹೊಸನೀರು ಹರಿಸಿದವರಲ್ಲಿ ಪ್ರಮುಖರು. 'ಅರೆಸತ್ತ ಬದುಕು', 'ಹೆದ್ದಾರಿಗುಂಟ', 'ಹೀಗೊಂದು ಟಾಪ್ ಪಯಣ', 'ಚಾಚಾ ನೆಹರು ಮತ್ತು ಈಚಲ ಮರ', 'ಹುರುಳಿಕಟ್ಟು' ಅವರ ಜನಪ್ರಿಯ ಪ್ರಬಂಧ ಸಂಕಲನಗಳು.

ಹಾಕುವುದೆಂದರೇನೇ ಆಪ್ಯಾಯಮಾನ! ಚೂಪಾದ ಹಲ್ಲುಗಳೇ ನಮ್ಮ ಆತ್ಮರಕ್ಷಣೆಯ ಆಯುಧಗಳಾಗಿದ್ದವು ಎಂದರೆ ಈಗ ಯಾರೂ ನಂಬಲಿಕ್ಕಿಲ್ಲ. ಹಲ್ಲಿದ್ದವನಿಗೆ ಕಡಲೆಯಿಲ್ಲ, ಕಡಲೆಯಿದ್ದವನಿಗೆ ಹಲ್ಲಿಲ್ಲ. ಬದುಕಿನ ವಿರೋಧಾಭಾಸವನ್ನು ಸೂಚಿಸುವ ಎಲ್ಲ ಕಾಲಕ್ಕೂ ಸಲ್ಲುವ ಅರ್ಥಪೂರ್ಣ ಗಾದೆಯಿದು. ಹಲ್ಲು ಹೋದವೆಂದರೆ ಮುಗಿಯಿತು. ಬಾಯಿರುಚಿ ಅಷ್ಟೇ ಅಲ್ಲ, ಬದುಕಿನ ರುಚಿಯನ್ನೇ ಕಳಕೊಂಡಷ್ಟು ಹಳವಂಡ ಬಹುತೇಕರಿಗೆ. ಹಲ್ಲಿದ್ದಾಗಲೇ ಎಲ್ಲ ಸರಕುಗಳನ್ನು ಅಗಿದು, ಜಗಿದು ಅನುಭವಿಸಿಬಿಡಬೇಕು. ಇದು ಪ್ರಕೃತಿ ನಿಯಮ. ಅದಕ್ಕೆಂತಲೇ, ನಮ್ಮ ನೆಲದ ಹಿರಿಯರು 'ಪ್ರಕೃತಿ ಕೆಡಿಸಿಕೊಳ್ಳಬಾರದೊ, ತಮ್ಮ' ಎಂದು ಆಗಾಗ ಕಿವಿ ಮಾತು ಹೇಳುತ್ತಿದ್ದರು. ದೇಹಾರೋಗ್ಯದ ಬಗ್ಗೆ ಕಾಳಜಿ ತೋರಿಸಬೇಕು ಎಂದು ಸಲಹೆ ಮಾಡುತ್ತಿದ್ದರು.

ಸಂತೆಯ ದಿನ ಗದಗ ಪ್ಯಾಟಿಯಿಂದ ಬರುತ್ತಿದ್ದ ಹಲ್ಲುಪುಡಿ ಮಾರುವ 'ನಾಟೀ ವೈದ್ಯ' ನೆನಪಾಗುತ್ತಾನೆ. 'ಯಾರಾದರು ಹಲ್ಲು ನೋವಿದ್ದರೆ ಮುಂದೆ ಬನ್ನಿರಿ' ಎಂದು ಪುಸಲಾಯಿಸಿ ಕರೆದು, ಅಲ್ಲಾಡುತ್ತಿದ್ದ ಹಲ್ಲನ್ನು ಹಿಡಿದು ನೋಡಿ, ಅದು ತುಸುವೇ ಒಸಡಿಗೆ ಅಂಟಿದ್ದರೆ ಬೆರಳು ಹಾಕಿ ಹಾಂ ಹೂಂ ಅನ್ನುವುದರೊಳಗಾಗಿ ಕಿತ್ತು ಅವರ ಕೈಗೆ ಕೊಟ್ಟು, ಬಾಟಲಿಯಲ್ಲಿದ್ದ ನೀರಿನಿಂದ ಬಾಯಿ ಮುಕ್ಕಳಿಸಲು ಹೇಳುತ್ತಿದ್ದ. ವೈದ್ಯಕೀಯ ಶಿಕ್ಷಣದಲ್ಲಿ ಹಲ್ಲಿಗೆ ಸಂಬಂಧಿಸಿದಂತೆಯೇ ವಿಶೇಷ ವಿಭಾಗ ಇರುವಾಗ, ಸಂತೆಯ ದಂತವೈದ್ಯರ ಆ ಕೈಚಳಕ ಅಚ್ಚರಿ ಮೂಡಿಸುತ್ತಿತ್ತು.

ಸಂತೆಗೆ ಬರುತ್ತಿದ್ದ 'ನಾಟಿ' ವೈದ್ಯನ ಆ ಕೈ ಚಳಕ ಅನುಸರಿಸಿದಂತೆ, ಸಹಪಾಠಿಗಳು ಯಾರಾದರೂ ಹಲ್ಲು ಅಲ್ಲಾಡುತ್ತದೆಂದರೆ, 'ಎಲ್ಲಿ ನೋಡೋಣ' ಎಂದು ಅವರ ಬಾಯಿಗೆ ಬೆರಳು ಹಾಕಿ – ತುಸುವೇ ಹಿಡಿದಿರುತ್ತಿದ್ದ ಸದರಿ ಹಲ್ಲನ್ನು ತೋರು ಬೆರಳಿಂದ ಮೀಟಿ, ಕ್ಷಣಾರ್ಧದಲ್ಲಿ ಕಿತ್ತು ಅವನ ಕೈಗೆ ಕೊಟ್ಟು ಬಿಡುತ್ತಿದ್ದೆವು. ಈಗ ಆ ದಿನಗಳನ್ನು ನೆನೆದರೆ ನಾವೆಷ್ಟು ಹುಂಬರು ಅನ್ನಿಸುತ್ತಿದೆ. ಹಾಗೆ ಕಿತ್ತು, ಬಿದ್ದ ಹಲ್ಲನ್ನು ಬಸುರಿ ಹೆಂಗಸರ ಮನೆಯ ಮಾಳಿಗೆಯ ಮೇಲೆ ಸಗಣಿಯಲ್ಲಿ ಹೂತಿಟ್ಟು, ಉಂಡೆ ಕಟ್ಟಿ ಎಸೆಯಲು ಹೇಳುತ್ತಿದ್ದರು – ಬೇಗ ಹೊಸ ಹಲ್ಲು ಬರುತ್ತದೆಂಬ ಹುಸಿನಂಬಿಕೆಯನ್ನು ಹುಟ್ಟು ಹಾಕಿದ್ದರು!

ನಿತ್ಯ ಸ್ನಾನಕ್ಕಾಗಿ, ತುಂಬಿದ ಬಾವಿಗೆ ಈಜಲು ಹೋಗುವಾಗ ದಾರಿಯ ಉದ್ದಕ್ಕೂ ಬೇಲಿಯಲ್ಲಿ ಬೆಳೆದಿರುತ್ತಿದ್ದ ಹಳದಿ ಹೂವಿನ ಹೊನ್ನವರೆ ಕಡ್ಡಿ, ಇಲ್ಲವೇ ಕೈಗೆಟುಕುವ ಹಾಗಿದ್ದ ಗೇಣುದ್ದದ ಬೇವಿನ ಕಡ್ಡಿಯನ್ನು ಮುರಿದು, ಒಂದು ಕಡೆ ದವಡೆ ಹಲ್ಲಿಂದ ಅಗಿದು ಬ್ರಶ್ ಮಾಡಿಕೊಂಡು, ದಾರಿಯುದ್ದಕ್ಕೂ ಹಲ್ಲುಜ್ಜಿಕೊಂಡು ನಡೆಯುವುದು ರೂಢಿ. ಕೆಲವೊಮ್ಮೆ ಮರೆತು, ಈಜುವ ಬಾವಿಯ ಹತ್ತಿರಕ್ಕೇ ಬಂದು ತಲುಪಿದ್ದರೆ, ಅದಕ್ಕೂ ಅಲ್ಲಿ ಒಂದು ದಾರಿ ಇರುತ್ತಿತ್ತು. ಬಾವಿಯ ಗೋಡೆಗೆ ಹೊಂದಿಸಿರುತ್ತಿದ್ದ ಹಿಟ್ಟುಗಲ್ಲಿನಲ್ಲಿ ಆಗಲೇ ಹಿರಿಯ ತಲೆಮಾರಿನವರು, ಚಿಪ್ಪಿನಂತೆ ತೋಡಿರುತ್ತಿದ್ದ ತಗ್ಗಿಗೆ ತುಸು ನೀರು ಚಿಮುಕಿಸಿ, ಗಟ್ಟಿ ಕಲ್ಲಿನಿಂದ ಕುಟ್ಟಿ ಕುಟ್ಟಿ, ಹಿಟ್ಟುಗಲ್ಲಿನ ಪುಡಿ ನೀರಿನೊಂದಿಗೆ ಬೆರೆತು ಥೇಟು ಪೇಸ್ಟಿನಂತೆಯೇ ಒದಗುತ್ತಿತ್ತು. ನಾವು, ನಮ್ಮ ತೋರುಬೆರಳಿಂದ ಬಾಚಿ ಬಾಚಿ, ಬಾಯಿಯ ಎರಡೂ ಕಡೆ ಸವರಿಕೊಂಡು, ತಿಕ್ಕಿದಾಗ, ಕಂಚಿನ ಪಾತ್ರೆಗಳನ್ನು ನದೀ ದಡದ ಮರಳಿಂದ ಉಜ್ಜಿದಾಗ ಫಳ ಫಳ ಹೊಳೆಯುವಂತೆಯೇ ನಮ್ಮ ಹಲ್ಲುಗಳು ಸ್ವಚ್ಛವಾಗುತ್ತಿದ್ದವು. ಹಲ್ಲುಜ್ಜಲು ಈ ಹಿಟ್ಟುಗಲ್ಲಿನ